(ಶ್ರೀ ಎಂ. ಪೈ. ಫೋರ್ಡೆ)

ಪೇಜ್ ಪಾಲಸಿ ಮಾಡಬೇಕು, ಅದಷ್ಟೂ ಈ ವ್ಯತ್ಯಾಸಗಳನ್ನು ಸರಿಪಡಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಹೇಳುತ್ತಿದ್ದೇವೆ. ಕೇಂದ್ರ ಸರ್ಕಾರದವರೂ ಕೂಡ ಇದನ್ನು ತಾತ್ವಿಕವಾಗಿ ಒಪ್ಪಿದ್ದಾರೆ. ಆದರೆ ಪ್ರಾಕ್ಟಿಕಲ್ ಆಗಿ ಒಂದೇ ವರ್ಷದಲ್ಲಿ ಇಡೀ ರಾಜ್ಯದಲ್ಲಿ ಮತ್ತು ಎಲ್ಲ ಸಂಸ್ಥೆಗಳಲ್ಲಿ ಈಕ್ವಲ್ ಪೇ ಮತ್ತು ಈಕ್ವಲ್ ವರ್ಕ್ ಎಂಬ ಸಿದ್ಧಾಂತವೇನಿದೆ ಅದನ್ನು ಕಾರ್ಯರೂಪಕ್ಕೆ ತರುವುದು ಅಷ್ಟೊಂದು ಸುಲಭವಾದುದಲ್ಲವೆಂದು ಹೇಳುತ್ತೇನೆ. ಆದರೂ ಕೂಡ ಮೈಸೂರು ರಾಜ್ಯದಲ್ಲಿ 1957 ರಿಂದ 1970 ರವರೆಗೆ ಪೇ ಸ್ಕೇಲ್ ರಿವಿಜನ್ ಮೂರು ಸಲವಾಗಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಪೇ ಸ್ಕೇಲ್ ರಿವಿಷನ್‌ನಿಂದ ಮತ್ತು ಡಿ. ಎ. ರಿವಿಷನ್‌ನಿಂದ 79 ಕೋಟಿ ರೂಪಾಯಿ ಖರ್ಚಾಗಿದೆ. ಈ ಹೊತ್ತು ಒಟ್ಟು ನಂಬಳ ನಮ್ಮ ರಾಜ್ಯದಲ್ಲಿ, ಏಡೆಡ್ ಇನ್‌ಸ್ಟಿಟ್ಯೂಷನ್ಸ್ ಸೇರಿ, 115 ಕೋಟಿ ರೂಪಾಯಿ ವರ್ಷಕ್ಕೆ ಕೊಡುತ್ತಿದ್ದೇವೆ. ಇದನ್ನು ನಮ್ಮ ಆದಾಯಕ್ಕೆ ಹೋಲಿಸಿದರೆ, ನಮ್ಮ ಆದಾಯ 310 ಕೋಟಿ ರೂಪಾಯಿ ಇದ್ದರೆ ಸುಮಾರು 37 ಪರ್ಸೆಂಟ್ ನಷ್ಟು ನಂಬಳ ಸಾರಿಗೆಗಳಿಗಾಗಿ ರಾಜ್ಯದ ರೆವೆನ್ಯೂನಲ್ಲಿ ಹೋಗುತ್ತಿದೆ ಅದ ಕಾರಣ ಮಿತಿ ಮೀರಿ ಜಾಸ್ತಿ ಮಾಡಿದರೆ ನಮ್ಮ ಪ್ರಗತಿಗೆ ಹೆಚ್ಚು ಧಕ್ಕೆಯಾಗುತ್ತದೆ. ಸರ್ಕಾರಿ ನೌಕರರ ಕಡೆಯಿಂದ ಈ ಪ್ರಶ್ನೆ ಪದೇ ಪದೇ ಬರುತ್ತಿದೆ. ಸರ್ಕಾರ ಇದರ ಬಗ್ಗೆ ಸಹಾನುಭೂತಿಯನ್ನು ತೋರಿಸಿದೆ. ಮತ್ತು ಈ ವಿಚಾರವನ್ನು ಅವರು ಯಾವಾಗಲೂ ಗಮನದಲ್ಲಿಟ್ಟುಕೊಳ್ಳುತ್ತಾರೆ. ಅದನ್ನು ತಿಳಿದುಕೊಳ್ಳದೆ ಹಠ ಮಾಡಿದರೆ ಸ್ವಲ್ಪ ಒಳ್ಳೆಯದಲ್ಲ. ಇಷ್ಟು ಮಾತ್ರ ನಾನು ಸ್ಪಷ್ಟವಾಗಿ ಹೇಳುತ್ತೇನೆ, ಹಣಕಾಸಿನ ಪರಿಸ್ಥಿತಿಯನ್ನು ತಿಳಿದುಕೊಂಡು ಏನೇನು ಮಾಡಲಿಕ್ಕೆ ಸಾಧ್ಯವಿದೆ ಅದನ್ನು ಮಾಡುವ ವಿಚಾರ ಸರ್ಕಾರಕ್ಕೆ ಇದೆ. ರಿಯಲ್ ವೇಜಸ್ ಏನಿದೆ ಅದನ್ನು ಕಾಪಾಡುವ ದೃಷ್ಟಿಯಿಂದ ಈ ಒಂದು ವಿಚಾರ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಬಳ್ಳಾರಿಯಲ್ಲಿ ನಡೆದ ಎನ್. ಜಿ. ಓ. ಸಮ್ಮೇಳನದಲ್ಲಿ ತುಟ್ಟಿಭತ್ಯವನ್ನು ಕೊಡುವ ವಿಚಾರ ಹಾಗೆ ಇರಲಿ, ನ್ಯಾಯವಾದ ಬೆಲೆಗೆ ಅತ್ಯಾವಶ್ಯಕ ವಸ್ತುಗಳೇನಿವೆ ಅದನ್ನು ಒದಗಿಸುವಂಥ ಕಾರ್ಯಕ್ರಮವನ್ನು ಕೈಕೊಂಡರೆ ಅದಕ್ಕೆ ಸರ್ಕಾರ ಸಹಾಯ ಮಾಡಲಿಕ್ಕೆ ತಯಾರಿದೆ ಎಂದು ತಿಳಿಸಲಾಯಿತು. ಆ ಪ್ರಕಾರವಾಗಿ ಎನ್. ಜಿ. ಓ. ಸಂಘದವರು ಒಂದು ಪ್ರಪೋಜಲ್ ಕೊಟ್ಟಿದ್ದಾರೆ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಹೊಂಡೂರಿನಲ್ಲಿ ಕಾರ್ಮಿಕ ಸಂಘದವರು ಒಂದು ಡಿಪಾರ್ಟ್‌ಮೆಂಟರ್ ಸ್ಟೋರ್ ಮಾಡಿದ್ದಾರೆ. ಅದನ್ನು ಮಾಡಿದ ನಂತರ ನೇಕಡ 15 ರಷ್ಟು ಖರ್ಚು ಕಡಮೆಯಾಗಿದೆ ಎಂದರೆ ತಿಂಗಳಿಗೆ 300 ರೂಪಾಯಿ ಖರ್ಚು ಮಾಡುತ್ತಿದ್ದವನು 2 ೦ ರೂಪಾಯಿ ಮಾತ್ರ ಖರ್ಚು ಮಾಡುತ್ತಿದ್ದಾನೆ, ಎಂದರೆ 15 ಪರ್ಸೆಂಟ್‌ನಷ್ಟು ಕಾಸ್ಟ್ ಆಫ್ ಲಿವಿಂಗ್ ಇಂಡಕ್ಸ್‌ನಲ್ಲಿ ಕಡಮೆಯಾಯಿತು. 200—300 ರೂಪಾಯಿ ಖರ್ಚು ಮಾಡುವವರಿಗೆ 40—50 ರೂಪಾಯಿ ಉಳಿತಾಯವಾಗುವುದಾದರೆ ಡಿ. ಎ. ಕೊಡುವುದರ ಹತ್ತರಷ್ಟು ಅನುಕೂಲವಾಗುತ್ತದೆ. ಈ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡಬೇಕು. ಎನ್. ಜಿ. ಓ. ಸಂಘದವರು ಈ ದಿಕ್ಕಿನಲ್ಲಿ ಪ್ರಯತ್ನ ಮಾಡುವುದಕ್ಕೆ ಒಪ್ಪಿದ್ದಾರೆ, ಅವರು ಪ್ರಪೋಸಲ್ ಕೊಟ್ಟಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಆ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

AMENDMENT OF THE BANGALORE MUNICIPAL CORPORATION ACT, 1949.

218. Sri T. R. SHAMANNA (Fort).—

Will the Minister for Municipal Administration be pleased to state:—

(*a*) whether there is a proposal to amend the Bangalore Municipal Corporation Act, 1949 to suit the present day civic needs;

(*b*) if so, the stage at which the proposal stands?

Sri B. BASAVALINGAPPA (Minister for Municipal Administration).—

(*a*) Yes.

(*b*) Taking action to introduce the Bill.

ಶ್ರೀ ಟಿ. ಆರ್. ಶಾಮಣ್ಣ.—ಹಿಂದೆ ಬೆಂಗಳೂರು ನಗರ ಕಾರ್ಪೊರೇಷನ್ ಆಕ್ಟನ್ನು, ಬೊಂಬಾಯಿ ಪ್ರಾದೇಶಿಕ ಕಾಯ್ದೆಯಲ್ಲಿ ತಿದ್ದುಪಡಿ ಮಾಡಬೇಕೆಂದು ಅಸೆಂಬ್ಲಿಯಲ್ಲಿ ಮುಂದೆ ಒಂದು ಮಸೂದೆಯನ್ನು ಮಂಡಿಸಿ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫೆರ್ ಮಾಡಿದರು. ಅದನ್ನೇ ಮುಂದು ವರಿಸುತ್ತಾರೆಯೋ ಅಥವಾ ಹೊಸದಾಗಿಯೇ ತರುತ್ತಾರೆಯೋ ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ ?

†Sri B. BASAVALINGAPPA.—At present there are two Municipal Corporations in the State; one for the City of Banaglore under the City of Bangalore Municipal Corporation Act, 1949 and the other for the twin cities of Hubli-Dharwar under the Bombay Provincial Municipal Corporation Act, 1949. With a view to have a uniform Municipal Corporation Act for the entire State it was proposed to adopt the Bombay Provincial Municipal Corporations Act, 1949. Accordingly a Bill called the Bombay Provincial Municipal Corporation (Extension and Amendment) Bill, 1968 was introduced in the Legislative Council on 17th September 1968 and subsequently referred to the Joint Select Committee. The motion for concurrence to the appointment of a Joint Select Committee to consider the Bill was also adopted by the Legislative Assembly on 8th September 1969 and the Legislative Assembly also appointed members to serve on the Joint Select Committee when the Assembly was dissolved. Consequently, action will have to be taken for moving a motion in the Legislative Assembly for appointment members of the new House to serve on the Joint Select Committee as members of the Legislative Assembly. Similar action may also be necessary in the case of nomination of members representing the Legislative Council on the Joint Select Committee as it is likely that some of the Legislative Council members who had been nominated earlier might have ceased to be members of the Legislative Council either due to expiry of their term of office or for other reasons. As a decision has been taken to proceed with the Bill now pending before the Joint Select Committee, action has been taken to move the Legislature Secretariat to take action for getting necessary motions passed nominating members to the Joint Select Committee to enable consideration of the Bill. The Minister for Municipal Administration and Housing has addressed the Secretary, Mysore Legislative Council on 5th October 1972.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಬಸವಲಿಂಗಪ್ಪನವರು ಮಂತ್ರಿಗಳಾದ ಮೇಲೆ ಕಾರ್ಪೊರೇಷನ್ ಅಧಿಕಾರವನ್ನು ಪೊಟಕು ಮಾಡುತ್ತಿದ್ದಾರೆನ್ನುವ ಆರೋಪ ಮಾಡುತ್ತಿದ್ದಾರೆ. ಅದು ಸರಿಯೇ ? ಕಾರ್ಪೊರೇಷನ್ ಅಧಿಕಾರವನ್ನು ಪೊಟಕು ಮಾಡುವುದಿಲ್ಲವೆನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಇದು ಮಾನ್ಯ ಸದಸ್ಯರ ಅಭಿಪ್ರಾಯ. ಎಷ್ಟು ಮಟ್ಟಿಗೆ ಸ್ವಾತಂತ್ರ್ಯ ಕೊಡಬೇಕೆಂಬ ವಿಚಾರದಲ್ಲಿ ಅವರಿಗೆ ನಾನೇನೂ ಹೇಳಬೇಕಾಗಿಲ್ಲ ಪ್ರಜಾಪ್ರಭುತ್ವದಲ್ಲಿ ಎಲ್ಲಿ ಸ್ವೇಚ್ಛಾವೃತ್ತಿಯೂ ಸ್ವಾತಂತ್ರ್ಯ ಎನ್ನುವ ರೀತಿಯಲ್ಲಿ ಹೇಳುವುದಾದರೆ ಅದು ಸರಿಯಿಲ್ಲ ಎಂದು ನನ್ನ ಭಾವನೆ. ಹೀಗೆ ಪ್ರಜಾಪ್ರಭುತ್ವದಲ್ಲಿ ಸ್ವೇಚ್ಛಾ ಮನೋವೃತ್ತಿ, ಒಳ್ಳೆಯದಲ್ಲ, ಬೊಂಬಾಯಿ ಕಾರ್ಪೊರೇಷನ್ ಆಕ್ಟ್ ಏನಿದೆ ಅದರಲ್ಲಿ ಸರಿಯಾದ ವ್ಯವಸ್ಥೆ ಮಾಡಿದ್ದಾರೆ. ಇಲ್ಲಿ ಏನು ಸ್ವೇಚ್ಛಾವೃತ್ತಿ ಎಂದು ಅವರು ಹೇಳುತ್ತಾರೆ ಅದು ಬೊಂಬಾಯಿ ಪ್ರೊವಿನ್ಷಿಯಲ್ ಕಾರ್ಪೊರೇಷನ್ ಆಕ್ಟ್‌ನಲ್ಲಿಲ್ಲ. ಅದನ್ನೆಲ್ಲ ಅಳವಡಿಸಿಕೊಂಡು ಯಾರಿಗೆ ಎಷ್ಟು ಅಧಿಕಾರ ಕೊಟ್ಟರೆ ಸರಿ ಹೋಗುತ್ತದೆ, ಸಾರ್ವಜನಿಕರ ಆಸ್ತಿಪಾಸ್ತಿಗಳು ಮತ್ತು ಅವರ ಹಿತಗಳನ್ನು ರಕ್ಷಣೆ ಮಾಡುವುದಕ್ಕೆ ಆಗುತ್ತದೆ ಎಂದು ಎಲ್ಲವನ್ನೂ ಗಮನಿಸಿದ್ದೇವೆ. ಇದರ ಬಗ್ಗೆ ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಕೂಲಂಕಷವಾಗಿ ನಲಹೆಗಳನ್ನು ಮಾಡುತ್ತಾರೆಂದು ನನ್ನ ಭಾವನೆ.

ಶ್ರೀ ಟಿ. ಆರ್. ಶಾಮಣ್ಣ.—ಒಂದು ಕಡೆ ಕಾರ್ಪೊರೇಷನ್‌ಗೆ ಅಧಿಕಾರ ಹೆಚ್ಚು ಕೊಡಬೇಕು ಮತ್ತು ಕಾರ್ಪೊರೇಷನ್ ಆಕ್ಟ್‌ನ್ನು ತಿದ್ದುಪಡಿ ಮಾಡಬೇಕು ಎಂದು ಹೇಳುತ್ತೀರಿ. ಇನ್ನೊಂದು ಕಡೆ ಅವರಿಗೆ ಇಂತಕ್ಕಂಥ ಅಧಿಕಾರವನ್ನು ಸರಿಯಾಗಿ ಉಪಯೋಗಿಸುತ್ತಾ ಇಲ್ಲ ಆದುದರಿಂದ ಅದನ್ನು ಸೂಪರ್‌ಸೀಡ್ ಮಾಡಬೇಕು ಎಂದು ಕಾಂಗ್ರೆಸ್ ಸದಸ್ಯರು ಯೋಚಿಸುತ್ತಿದ್ದಾರಂತೆ ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

ಶ್ರೀ ಬಿ. ಬಸವಲಿಂಗಪ್ಪ.—ಇದು ಮಾನ್ಯ ಸದಸ್ಯರ ಅಭಿಪ್ರಾಯ ಎಂದು ಕಾಣುತ್ತದೆ. ಯಾವ ಯಾವ ಕಾಲದಲ್ಲಿ ಏನೇನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಸ್ವಾಮಿ, 1966 ರಲ್ಲಿ ಕಾರ್ಪೊರೇಷನ್ ರದ್ದು ಮಾಡುವಾಗ ಅವರ ಮೇಲೆ 14 ಥಾರ್ಜ್‌ಷೀಟ್ ಹಾಕಿತ್ತು. ಅದರಲ್ಲಿ ಮುಖ್ಯವಾದ ಒಂದು ವಿಷಯ ಹೇಳುತ್ತೇನೆ. ಕಾರ್ಪೊರೇಷನ್‌ನವರು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಲಿಲ್ಲ ಎನ್ನುವುದು ಒಂದು ಥಾರ್ಜ್‌ಷೀಟ್. ಕಾರ್ಪೊರೇಷನ್ ಸೂಪರ್‌ಸೀಡ್ ಆಗಿ ಮತ್ತೆ ನೀವು ಅಧಿಕಾರಕ್ಕೆ ಬಂದು ಇಷ್ಟು ವರ್ಷ ಆಗಿದ್ದರೂ ಕೂಡ ಸರ್ಕಾರ ಅದನ್ನು ಮಾಡಿದೆಯೇ, ಒಂದುವೇಳೆ ಮಾಡದೇ ಹೋದರೆ ಇದು ಸರ್ಕಾರದ ಅದಕ್ಷತೆಗೆ ಕಾರಣವಾಗುವುದಿಲ್ಲವೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಗಮನ ಇಟ್ಟಿಲ್ಲ ಎಂದು ಕಾಣುತ್ತದೆ. ಹೋದ ಅಕ್ಟೋಬರ್‌ನಲ್ಲೂ ಹೇಳಿದ್ದೇನೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಏನು ಇದೆ ಅದನ್ನು ಮಾಡಿದ್ದೇವೆ. ಅದು ವ್ಯವಸ್ಥಿತವಾದ ರೂಪದಲ್ಲಿ ರಾಜ್ಯಾಂಗದ ಪ್ರಕಾರ ಆಗಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ನಂತರ ಎಲ್ಲಾ ಅಧಿಕಾರಿಗಳನ್ನೂ ಕರೆದು ಒಂದು ಮೀಟಿಂಗ್ ಮಾಡಿ ಇದರಲ್ಲಿ ಯಾವರೀತಿ ರಾಜ್ಯಾಂಗದ ಪ್ರಕಾರವಾಗಿ ಇರಬೇಕು ಎನ್ನುವ ಒಂದು ಕರಡು ಪ್ರತಿ ಮಾಡಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಕಾರ್ಪೊರೇಷನ್‌ಗೆ ಕಳುಹಿಸಿದ್ದೇವೆ. ಅವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಅನೇಕ ಕಾರ್ಪೊರೇಷನ್‌ಗಳಲ್ಲಿ ಕಾರ್ಪೊರೇಷನ್ ಸದಸ್ಯರಿಗೆ ಸ್ವಲ್ಪ ಸಂಭಾವನೆ ಕೊಡತಕ್ಕಂಥ ಪದ್ಧತಿ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಕಾರ್ಪೊರೇಷನ್ ಸದಸ್ಯರಿಗೂ ಸಂಭಾವನೆ ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೊಸ ಆಕ್ಟ್ ಬರುವುದರೊಳಗೆ ಇದನ್ನು ಜಾರಿ ಮಾಡುತ್ತೇವೆ ಎಂದು ತಿಳಿಸುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಆ ನಲಹೆ ಬಹಳ ವರ್ಷದಿಂದಲೂ ಇದೆ. ನಾನು ಕಾರ್ಪೊರೇಷನ್ ಸದಸ್ಯನಾಗಿದ್ದಾಗಿನಿಂದಲೂ ಇದೆ. ಈ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಏನು ಇವ್ವಾರೋ ಅವರು ಆ ನಲಹೆಯನ್ನು ಪರಿಶೀಲನೆ ಮಾಡುತ್ತಾರೆ.